# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಲಬುರಗಿ ಜಿಲ್ಲೆಯ ಜೇವರ್ಗಿ ವಿಧಾನಸಭೆ ಕ್ಷೇತ್ರದ ವಕ್ಫ್ ಸಂಸ್ಥೆಗಳ ವಿವಿಧ ಅಭಿವೃದ್ಧಿ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:** 1) ಸರ್ಕಾರಿ ಆದೇಶ ಸಂಖ್ಯೆ: **RD 139 CWP 1977** ದಿನಾಂಕ: 23-08-1979 & **MWD 147 WES 2019**, ದಿನಾಂಕ: 05-02-2020.

2) ಸರ್ಕಾರಿ ಆದೇಶ ಸಂಖ್ಯೆ: **MWD 33 WES 2022**, ದಿನಾಂಕ: 11.04.2022, 28.06.2022 & 31-10-2022.

3) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3 &9) ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 544 ವೆಚ್ಚ-3/2022, ದಿನಾಂಕ: 03-09-2022.

ಕರ್ನಾಟಕ ರಾಜ್ಯ ವಕ್ಫ್ ಮಂಡಳಿ
I.No. 844
16 JAN 2023
#6, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು-052.

**ಪ್ರಸ್ತಾವನೆ:**

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ವಕ್ಫ್ ಸಂಸ್ಥೆಗಳಿಗೆ Grant-in Aid Code ಅನ್ನು ಆಗಸ್ಟ್ 1979 ಹಾಗೂ ಫೆಬ್ರವರಿ 2020 ರಲ್ಲಿ ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ (2)ರ ಸರ್ಕಾರಿ ಆದೇಶದಲ್ಲಿ 2022-23ನೇ ಸಾಲಿಗೆ ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಲೆಕ್ಕಶೀರ್ಷಿಕೆ: 2225-04-800-0-04(015) ರಡಿಯಲ್ಲಿ ರೂ.1000.00ಲಕ್ಷಗಳ ಅನುದಾನವನ್ನು ಹಾಗೂ ವಕ್ಫ್ ಸ್ವತ್ತಿನ ಸಂರಕ್ಷಣೆಗಾಗಿ ಲೆಕ್ಕಶೀರ್ಷಿಕೆ: 2225-04-102-0-03(059) ರಡಿಯಲ್ಲಿ ಸರ್ಕಾರವು ರೂ.1200.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿದ್ದು, ಮೊದಲನೇ, ಎರಡನೇ ಹಾಗೂ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಮಂಜೂರು ಮಾಡಲಾಗಿರುತ್ತದೆ.

ಮೇಲೆ ಓದಲಾದ (3)ರ ಅನಧಿಕೃತ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಕಲಬುರಗಿ ಜಿಲ್ಲೆಯ ಜೇವರ್ಗಿ ವಿಧಾನಸಭೆ ಕ್ಷೇತ್ರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ರೂ.1.50 ಕೋಟಿಗಳ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿದ್ದು, ಅದರಂತೆ ಕ್ರಮಕೈಗೊಳ್ಳುವಂತೆ ತಾತ್ವಿಕ ಒಪ್ಪಿಗೆ ನೀಡಿರುತ್ತದೆ. ಅದರನ್ವಯ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: MWD 03 WGA 2023,ಬೆಂಗಳೂರು, ದಿನಾಂಕ: 16.01.2023.**

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಲಬುರಗಿ ಜಿಲ್ಲೆಯ ಜೇವರ್ಗಿ ವಿಧಾನಸಭೆ ಕ್ಷೇತ್ರದಲ್ಲಿನ ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತೂ ಜೀರ್ಣೋದ್ಧಾರಕ್ಕಾಗಿ ಲೆಕ್ಕಶೀರ್ಷಿಕೆ: 2225-04-800-0-04(015) ರಡಿಯಲ್ಲಿ ಹಾಗೂ ವಕ್ಫ್ ಸ್ವತ್ತುಗಳ ಸಂರಕ್ಷಣೆಗಾಗಿ ಲೆಕ್ಕಶೀರ್ಷಿಕೆ: 2225-04-102-0-03(059) ರಡಿಯಲ್ಲಿ ಆರ್ಥಿಕ ಇಲಾಖೆಯು ತಾತ್ವಿಕ ಒಪ್ಪಿಗೆ ನೀಡಿರುವಂತೆ ಅನುಬಂಧ-1ರಲ್ಲಿ ಆಯಾ ಸಂಸ್ಥೆಗಳ ಎದುರಿಗೆ ಸೂಚಿಸಲಾಗಿರುವ ಪ್ರತ್ಯೇಕ ಮೊತ್ತವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

.........2

**ಷರತ್ತುಗಳು:**

1. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2225-04-800-0-04(015) ರಡಿಯಲ್ಲಿ ವಕ್ಫ್ ಸಂಸ್ಥೆಗಳ ದುರಸ್ಥಿ ಮತ್ತು ಜೀರ್ಣೋದ್ಧಾರಕ್ಕಾಗಿ ಹಾಗೂ ಲೆಕ್ಕಶೀರ್ಷಿಕೆ: 2225-04-102-0-03(059) ರಡಿಯಲ್ಲಿ ವಕ್ಫ್ ಸ್ವತ್ತುಗಳ ಸಂರಕ್ಷಣೆಗಾಗಿ ಮುಂದಿನ ದಿನಗಳಲ್ಲಿ ಆರ್ಥಿಕ ಇಲಾಖೆಯು ಒದಗಿಸುವ ಅನುದಾನದ ಅಡಿಯಲ್ಲಿ ಭರಿಸತಕ್ಕದ್ದು.
2. ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯು Grant-in-Aid ನಲ್ಲಿರುವ ಸೂಚನೆಗಳನ್ನು ವಕ್ಫ್ ಸಂಸ್ಥೆಗಳಿಗೆ ಹಣ ಬಿಡುಗಡೆಗೊಳಿಸುವ ಮುನ್ನ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ರೂ.5.00 ಲಕ್ಷಕ್ಕಿಂತ ಹೆಚ್ಚು ಅನುದಾನ ಮಂಜೂರು ಮಾಡಲಾಗಿರುವ ವಕ್ಫ್ ಸಂಸ್ಥೆಗಳಿಗೆ ಮೊದಲನೇ ಕಂತಿನ ರೂ.5.00 ಲಕ್ಷಗಳನ್ನು ಪ್ರಥಮ ಕಂತಿನಲ್ಲಿ ಬಿಡುಗಡೆ ಮಾಡಿ ಇನ್ನುಳಿದ ಮೊತ್ತವನ್ನು ಎರಡನೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು. 2ನೇ ಕಂತಿನ ಅನುದಾನ ಬಿಡುಗಡೆ ಮಾಡುವ ಮೊದಲು ಕಾಮಗಾರಿಯ ಪ್ರಗತಿಯನ್ನು ಕಡ್ಡಾಯವಾಗಿ ಪರಿಶೀಲಿಸಿ ಪ್ರಗತಿಯಾದಲ್ಲಿ ಹಣ ಬಳಕೆ ಪ್ರಮಾಣ ಪತ್ರ ಪಡೆದ ನಂತರ ಮಾತ್ರ ಅನುದಾನ ಬಿಡುಗಡೆ ಮಾಡತಕ್ಕದ್ದು.
4. ರೂ.5.00ಲಕ್ಷಕ್ಕಿಂತ ಕಡಿಮೆ ಅನುದಾನ ಮಂಜೂರಾಗಿರುವ ವಕ್ಫ್ ಸಂಸ್ಥೆಗಳಿಗೆ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡತಕ್ಕದ್ದು.
5. ಸದರಿ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆಗೊಳಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಬಳಕೆಯಾಗಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಸಂಸ್ಥೆಗಳು ಕಡ್ಡಾಯವಾಗಿ ಕಳುಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ 544 ವೆಚ್ಚ-3/2022, ದಿ:03.09.2022 ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2022, ದಿನಾಂಕ: 04.04.2022 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

Mukhtar Pasha H-G. 16/1/2023
(ಮುಕ್ತಾರ್ ಪಾಷ ಹೆಚ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು
ವಕ್ಫ್ ಇಲಾಖೆ.

ಗೆ:

1) ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು
2) ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ವಿಧಾನ ಸೌಧ, ಬೆಂಗಳೂರು.
3) ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಕರ್ನಾಟಕ ರಾಜ್ಯ ವಕ್ಫ್ ಮಂಡಳಿ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
4) ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
5) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸ ಸೌಧ, ಬೆಂಗಳೂರು.
6) ಅಧ್ಯಕ್ಷರು/ವಕ್ಫ್ ಅಧಿಕಾರಿಗಳು, ಜಿಲ್ಲಾ ವಕ್ಫ್ ಸಲಹಾ ಸಮಿತಿ, ಕಲಬುರಗಿ.
7) ಸಮನ್ವಯ ಅಧಿಕಾರಿ, ಅಲ್ಪಸಂಖ್ಯಾತರ ಸಹಾಯವಾಣಿ ಕೇಂದ್ರ,(24x7) ವಸಂತನಗರ ಬೆಂಗಳೂರು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಸರ್ಕಾರದ ಆದೇಶ ಸಂಖ್ಯೆ: MWD 03 WGA 2023,**

**ಬೆಂಗಳೂರು, ದಿನಾಂಕ: 16.01.2023 ಕ್ಕೆ ಅನುಬಂಧ-1**

| ಕ್ರ. ಸಂ. | ಸಂಸ್ಥೆಯ ಹೆಸರು | ಕಾಮಗಾರಿ | ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| | ಕಲಬುರಗಿ ಜಿಲ್ಲೆ ಜೇವರ್ಗಿ ವಿಧಾನಸಭಾ ಕ್ಷೇತ್ರ | | |
| 1 | ಜಾಮಿಯ ಮಸೀದಿ, ಹಂಚಿನಾಳ ಎಸ್.ಎ., ಜೇವರ್ಗಿ | (ಕಾಂಪೌಂಡ್ ಗೋಡೆ ನಿರ್ಮಾಣ) | 2.00 |
| 2 | ಜಾಮಿಯಾ ಮಸೀದಿ, ಚಿಕ್ಕ ಜೇವರ್ಗಿ, ಜೇವರ್ಗಿ | (ಕಾಂಪೌಂಡ್ ಗೋಡೆ ನಿರ್ಮಾಣ) | 5.00 |
| 3 | ಈದ್ಗಾ, ಇಟಗಾ, ಜೇವರ್ಗಿ | (ಕಾಂಪೌಂಡ್ ಗೋಡೆ ನಿರ್ಮಾಣ) | 4.00 |
| 4 | ಖಬರಸ್ಥಾನ್, ಎಸ್. ಮಳ್ಳಿ, ಜೇವರ್ಗಿ | (ಕಾಂಪೌಂಡ್ ಗೋಡೆ ನಿರ್ಮಾಣ) | 4.00 |
| 5 | ಮೆಹಬೂಬ ಸುಬಾನಿ ದರ್ಗಾ, ಮಾವನೂರು ಗ್ರಾಮ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 6 | ಷಾ ಹುಸೇನಿ ದರ್ಗಾ, ಕಲ್ಲಹಂಗರಗಾ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 7 | ಜಾಮಿಯಾ ಮಸೀದಿ, ಹಿಪ್ಪರಗಾ ಎಸ್.ಎನ್. ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 8 | ಷಾ ಹುಸೇನಿ ದರ್ಗಾ, ಮಲ್ಲಾ (ಕೆ), ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 9 | ಸೈಯದ್ ಪೀರ್ ದರ್ಗಾ, ಸೈದಾಪೂರ, ಯಡ್ರಾಮಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 10 | ಖಬರಸ್ಥಾನ್, ಹರವಾಳ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 11 | ಶೇಖ್ ಫರೀದ್ ಶಕರ್ ಗಂಜ್ ದರ್ಗಾ, ಹರನೂರು, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 12 | ಖಬರಸ್ಥಾನ್, ಬಿರಾಳ (ಬಿ), ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 3.00 |
| 13 | ಮೆಹಬೂಬ ಸುಬಾನಿ ದರ್ಗಾ, ಕಟ್ಟಿಸಂಗಾವಿ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 14 | ವಜಿರುದ್ದಿನ್ ದರ್ಗಾ, ಬಿರಾಳ್ (ಬಿ), ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 15 | ಮೌಲಾಲಿ ದರ್ಗಾ, ಮುದಬಾಳ (ಕೆ), ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 16 | ಷಾ ಹುಸೇನಿ ದರ್ಗಾ, ಹಂಗರಗಾ (ಬಿ), ಯಡ್ರಾಮಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 17 | ಲಾಲ್ ಸಾಬ್ ದರ್ಗಾ, ಮಾರಡಗಿ ಎಸ್. ಎನ್. , ಯಡ್ರಾಮಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 2.00 |
| 18 | ಜಲಾಲುದ್ದಿನ್ ದರ್ಗಾ, ದೇಸಣಗಿ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 19 | ಮೆಹಬೂಬ್ ಸುಬಾನಿ ದರ್ಗಾ, ಚಿಕ್ಕ ಜೇವರ್ಗಿ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 20 | ಮಹಮದೀಯ ಮಸೀದಿ, ಟಿಪ್ಪು ಭವನದ ಹತ್ತಿರ, ಜೇವರ್ಗಿ ಪಟ್ಟಣ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 21 | ಜಾಮಿಯಾ ಮಸೀದಿ, ಬಣಮಿ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 22 | ಮೆಕ್ಕಾ ಮಸ್ಜಿದ್, ಜೋಪಡಪಟ್ಟಿ, ಜೇವರ್ಗಿ ಪಟ್ಟಣ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 23 | ಖೂದ್‌ಬುದ್ದಿನ್ ಭಕ್ತಿಯಾರಿ ದರ್ಗಾ, (ರದ್ದೆವಾಡಗಿ ಕ್ರಾಸ್) ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |
| 24 | ದಾವಲ್ ಮಲ್ಲಿಕ್ ದರ್ಗಾ, ಚನ್ನೂರು, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 25 | ದಾವಲ್ ಮಲ್ಲಿಕ್ ದರ್ಗಾ, ಮಳ್ಳಿ, ಯಡ್ರಾಮಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 10.00 |

.....2

| | | | |
|---|---|---|---|
| 26 | ಮಸೀದಿ, ಬಳ್ಳುಂಡಗಿ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 5.00 |
| 27 | ಲಾಲ್ ಸಾಬ್ ದರ್ಗಾ, ಮಾರಡಗಿ ಎಸ್. ಎ., ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 3.00 |
| 28 | ಮಲ್ಲಿಕ್ ಸಾಬ್ ದರ್ಗಾ, ಚಿದಾನಂದ ಸ್ವಾಮಿ ದೇವಸ್ಥಾನದ ಹತ್ತಿರ, ಇಟಗಾ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 3.00 |
| 29 | ಮಸೀದಿ, ಬೋಸಗಾ (ಕೆ), ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 3.00 |
| 30 | ದರ್ಗಾ, ಮುರುಗಾನೂರು, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| 31 | ಮಸೀದಿ, ಸೊನ್ನ, ಜೇವರ್ಗಿ | (ದುರಸ್ಥಿ ಮತ್ತು ಜೀರ್ಣೋದ್ಧಾರ) | 4.00 |
| | | ಒಟ್ಟು | 150.00 |

(ಒಂದು ನೂರ ಐವತ್ತು ಲಕ್ಷ ರೂಪಾಯಿಗಳು ಮಾತ್ರ)

H. G. 16/1/2023

(ಮುಕ್ತಾರ್ ಪಾಷ ಹೆಚ್.ಜಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್
ಮತ್ತು ವಕ್ಫ್ ಇಲಾಖೆ.